ರಾಜ್ಯದಲ್ಲಿ ಕುಡಿಯುವ ನೀರಿನ ಯೋಜನೆಯ ಅನುದಾನದ ಬಗ್ಗೆ

2928(2681) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) ಮಾನ್ಯ ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಈ ಸಾಲಿನ ಬೇಸಿಗೆ ಅವಧಿಯಲ್ಲಿ ಕುಡಿಯುವ ನೀರಿಗಾಗಿ ಕ್ಷೇತ್ರವಾರು ಬಿಡುಗಡೆಗೊಳಿಸಿದ ಒಟ್ಟು ಹಣವೆಷ್ಟು; ವಿವರ ನೀಡುವುದು?

ಶ್ರೀ ಕೆ.ಬಿ. ಕೋಳಿವಾಡ್ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು)

ಅ) ಈ ಸಾಲಿನ ಬೇಸಿಗೆಯಲ್ಲಿ ಸರ್ಕಾರದಿಂದ ಕುಡಿಯುವ ನೀರಿಗಾಗಿ ಬಿಡುಗಡೆ ಮಾಡಲಾದ ಅನುದಾನದ ವಿವರಗಳನ್ನು (ಜಿಲ್ಲಾವಾರು) ಅನುಬಂಧ-1ರಲ್ಲಿ ನೀಡಲಾಗಿದೆ.

ಅನುಬಂಧ-1

(ವಿಧಾನ ಸಭೆಯ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2681ರ ಉತ್ತರದ ಲಗತ್ತು)

ಕುಡಿಯುವ ನೀರಿಗಾರಿ 2003-04ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನದ ವಿವರಗಳು

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಜಿಲ್ಲೆ	ರಾಜ್ಯವಲಯ	ಕೇಂದ್ರ ವಲಯ ಪರಿಹಾರ ನಿಧಿ ರಾಷ್ಟ್ರೀಯ ವಿಪತ್ತು ಸಾದಿಲ್ವಾರು ನಿಧಿ	ಪ್ರಕೃತಿ ವಿಕೋಪ
1	2	3	4	5
1.	ಬೆಂಗಳೂರು (ಗ್ರಾ)	119.12	228.00	224.00
2.	ಬೆಂಗಳೂರು (ನ)	73.12	241.00	98.00
3.	ದಾವಣಗೆರೆ	160.66	216.10	142.00
4.	ಕೋಲಾರ	162.57	346.08	268.00
5.	ಶಿವಮೊಗ್ಗ	109.67	159.20	148.00
6.	ತುಮಕೂರು	183.98	374.25	240.00
7.	ಚಿತ್ರದುರ್ಗ	64.14	174.30	152.00
8.	ಚಾಮರಾಜನಗರ	59.88	202.90	120.00
9.	ಮೈಸೂರು	146.78	0.00	149.00
10.	ಮಂಡ್ಯ	537.24	262.90	146.00
11.	ಚಿಕ್ಕಮಗಳೂರು	96.42	206.90	148.00
12.	ದಕ್ಷಿಣ ಕನ್ನಡ	119.19	0.00	40.00
13.	ಹಾಸನ	108.11	263.00	203.00
14.	ಉಡುಪಿ	30.28	152.70	15.00
15.	ಕೊಡಗು	48.78	139.40	54.00

1	2	3	4	5
16.	ಬಾಗಲಕೋಟೆ	67.36	148.20	155.00
17.	ಬೆಳಗಾವಿ	233.32	728.50	468.00
18.	ಬಿಜಾಪುರ	113.73	278.92	119.00
19.	ಧಾರವಾಡ	65.93	147.60	128.00
20.	ಗದಗ	166.87	89.00	133.00
21.	ಹಾವೇರಿ	80.49	122.30	162.00
22.	ಉತ್ತರ ಕನ್ನಡ	62.26	155.80	160.00
23.	ಬಳ್ಳಾರಿ	54.82	0.00	185.00
24.	ಬೀದರ್	71.23	198.90	120.00
25.	ಗುಲ್ಬರ್ಗಾ	133.99	438.95	240.00
26.	ಕೊಪ್ಪಳ	75.89	278.70	106.00
27.	ರಾಯಚೂರು	92.20	221.40	117.00
	ಒಟ್ಟು	**3238.03**	**5775.00**	**4240.00**

ಉಡುಪಿ ಜಿಲ್ಲೆಯಲ್ಲಿ ಆಶ್ರಯ ಯೋಜನೆಯ ಪ್ರಗತಿ

2929(2682) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಿಂದ ಉಡುಪಿ ಜಿಲ್ಲೆಯಲ್ಲಿ ಮಂಜೂರಾಗಿ ಹಂಚಲ್ಪಟ್ಟ ಆಶ್ರಯ ಮನೆಗಳ ಕ್ಷೇತ್ರವಾರು ಫಲಾನುಭವಿಗಳ ಒಟ್ಟು ಸಂಖ್ಯೆ ಎಷ್ಟು;

ಆ) ಆಶ್ರಯ ಮನೆಯ ವಿಸ್ತೀರ್ಣ ಹಾಗೂ ನಿರ್ಮಾಣಕ್ಕೆ ತಗಲುವ ವೆಚ್ಚ ಎಷ್ಟು;

ಇ) ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದಲ್ಲಿ ಎಷ್ಟು ಆಶ್ರಯ ಮನೆಯನ್ನು ನಿರ್ಮಿಸಲು ಉದ್ದೇಶಿಸಲಾಗಿದೆ; ಹಂಚಿಕೆ ಮಾಡಲು ಹಾಕಿಕೊಂಡಿರುವ ಕಾಲಮಿತಿಯೇನು;

ಈ) ಇದಕ್ಕಾಗಿ ಮೀಸಲಿಟ್ಟ ಮಂಜೂರಾದ ಹಾಗೂ ಖರ್ಚಾದ ಹಣವೆಷ್ಟು?

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು)

ಅ) 10888. ಕ್ಷೇತ್ರವಾರು ವಿವರ ಅನುಬಂಧ–ಆನಲ್ಲಿ ನೀಡಲಾಗಿದೆ.

ಆ) ಗ್ರಾಮೀಣ ಆಶ್ರಯ ಯೋಜನೆಯಡಿಯಲ್ಲಿ ನಿರ್ಮಿಸಿದ ಮನೆಯ ವಿಸ್ತೀರ್ಣ ಕನಿಷ್ಠ 200ಚ. ಅಡಿ ಇರಬೇಕು. ಇದಕ್ಕಾಗಿ ಮನೆಯೊಂದಕ್ಕೆ ರೂ. 20000 ಗಳ ಅನುದಾನವನ್ನು ನೀಡಲಾಗುತ್ತದೆ. ಪ್ರತಿ ಮನೆಗೆ ರೂ. 20,000/– ಅಥವಾ ಅದಕ್ಕಿಂತಲೂ ಹೆಚ್ಚು ವೆಚ್ಚ ಮಾಡಬಹುದು.

ನಗರ ಆಶ್ರಯ ಯೋಜನೆಯಡಿಯಲ್ಲಿ ನಿರ್ಮಿಸಿದ ಮನೆಯ ವಿಸ್ತೀರ್ಣ ಕನಿಷ್ಠ 225 ಚ. ಅಡಿ ಇರಬೇಕು. ಇದಕ್ಕಾಗಿ ಮನೆಯೊಂದಕ್ಕೆ ರೂ. 25,000/–ಗಳ ಅನುದಾನವನ್ನು ನೀಡಲಾಗುತ್ತದೆ. ಇದರ ಜೊತೆ ರೂ. 5,000/– ಗಳ ಸ್ವಂತ ವಂತಿಕೆಯನ್ನು ಹೂಡಬೇಕು. ಪ್ರತಿ ಮನೆಗೆ ರೂ. 30,000/– ಅಥವಾ ಅದಕ್ಕಿಂತಲೂ ಹೆಚ್ಚು ವೆಚ್ಚ ಮಾಡಬಹುದು.

ಇ) ಬ್ರಹ್ಮಾವರ ವಿಧಾನಸಭಾ ಕ್ಷೇತ್ರದಲ್ಲಿ 1999–2000ನೇ ಶ್ರೇಣಿಯಿಂದ 2002–03ರ ವರೆಗೆ ನಿರ್ಮಿಸಲಾದ ಆಶ್ರಯ ಮನೆಗಳು, ಮತ್ತು ನಿರ್ಮಿಸಲು ಉದ್ದೇಶಿಸಿರುವ ಆಶ್ರಯ ಮನೆಗಳ ಭೌತಿಕ ಮತ್ತು ಆರ್ಥಿಕ ವಿವರ ಅನುಬಂಧ–ಅನಲ್ಲಿದೆ.

ಈ) ಮೇಲ್ಕಂಡ ಎಲ್ಲಾ ಮನೆಗಳ ಹಂಚಿಕೆಯನ್ನು ಮಾಡಲಾಗಿದೆ. 2003–04ರ ಗುರಿಯನ್ನು ಇನ್ನು ನೀಡಿಲ್ಲ.

ಅನುಬಂಧ ಅ

ಬ್ರಹ್ಮಾವರ ವಿಧಾನಸಭಾ ಕ್ಷೇತ್ರದಲ್ಲಿ 1999–2000ನೇ ಶ್ರೇಣಿಯಿಂದ 2002–03ರ ವರೆಗೆ ನಿರ್ಮಿಸಲಾದ, ಮತ್ತು ನಿರ್ಮಿಸಲು ಉದ್ದೇಶಿಸಿರುವ ಮನೆಗಳ ಭೌತಿಕ ಮತ್ತು ಆರ್ಥಿಕ ವಿವರ

ಯೋಜನೆ: ಗ್ರಾಮೀಣ ಆಶ್ರಯ (ರೂ. ಲಕ್ಷಗಳಲ್ಲಿ)

ಶ್ರೇಣಿ	ಗುರಿ	ಪೂರ್ತಿ ಗೊಳಿಸಿದ ಮನೆಗಳ ಸಂಖ್ಯೆ	ಪ್ರಗತಿ ಯಲ್ಲಿರುವ ಮನೆಗಳ ಸಂಖ್ಯೆ	ಮೀಸಲಿಟ್ಟ ಹಣ	ಮಂಜೂರಾದ ಹಣ	ಖರ್ಚಾದ ಹಣ
1999–2000		ಗುರಿ ನಿಗದಿಪಡಿಸಿಲ್ಲ				
2000–01	652	644	8	ಪ್ರಗತಿಗನುಗುಣವಾಗಿ	130.200	124.100
2001–02	441	362	79	ಹಣ ಬಿಡುಗಡೆ ಮಾಡಲಾಗುತ್ತಿದೆ	85.00	76.000
2002–03	335	76	139		33.000	32.200
ಒಟ್ಟು	**1428**	**1082**	**226**		**248.200**	**232.300**

ಯೋಜನೆ: ನವಗ್ರಾಮ (ರೂ. ಲಕ್ಷಗಳಲ್ಲಿ)

ಶ್ರೇಣಿ	ಗುರಿ	ಪೂರ್ತಿ ಗೊಳಿಸಿದ ಮನೆಗಳ ಸಂಖ್ಯೆ	ಪ್ರಗತಿ ಯಲ್ಲಿರುವ ಮನೆಗಳ ಸಂಖ್ಯೆ	ಮೀಸಲಿಟ್ಟ ಹಣ	ಮಂಜೂರಾದ ಹಣ	ಖರ್ಚಾದ ಹಣ
2001–02	146	–	–	ಪ್ರಗತಿಗನುಗುಣವಾಗಿ ಹಣ ಬಿಡುಗಡೆ ಮಾಡಲಾಗುತ್ತಿದೆ	3.000	3.000
2002–03	56.00	–	–		0.000	0.000
ಒಟ್ಟು	**202**	**0**	**0**		**3.000**	**0.000**

ಯೋಜನೆ: ನಗರ ಆಶ್ರಯ (ರೂ. ಲಕ್ಷಗಳಲ್ಲಿ)

ಶ್ರೇಣಿ	ಗುರಿ	ಪೂರ್ತಿ ಗೊಳಿಸಿದ ಮನೆಗಳ ಸಂಖ್ಯೆ	ಪ್ರಗತಿ ಯಲ್ಲಿರುವ ಮನೆಗಳ ಸಂಖ್ಯೆ	ಮೀಸಲಿಟ್ಟ ಹಣ	ಮಂಜೂರಾದ ಹಣ	ಖರ್ಚಾದ ಹಣ
1999–2000	42	41	1	ಪ್ರಗತಿಗನುಗುಣವಾಗಿ	10.500	10.440
2000–01	29	28	1	ಹಣ ಬಿಡುಗಡೆ	7.250	7.160
2001–02	13	11	2	ಮಾಡಲಾಗುತ್ತಿದೆ	4.000	3.080
2002–03	40	6	11		3.000	1.590
ಒಟ್ಟು	**124**	**86**	**15**		**24.750**	**22.270**
ಒಟ್ಟು ಮನೆಗಳು	**1754**	**1168**	**241**		**275.95**	**254.57**

ಅನುಬಂಧ–ಆ

Rural Ashraya Constituency name	2000-01 Target	2000-01 Completed	2001-02 Target	2001-02 Completed	2002-03 Target	2002-03 Completed
Byndoor	700	678	470	414	320	87
Kundapura	681	657	468	341	320	66
Brahmavara	652	644	441	362	335	76
Udupi	175	170	459	443	275	21
Kaup	638	629	444	387	300	43
Karkala	700	700	609	576	280	162
Total	**3546**	**3478**	**2891**	**3523**	**1830**	**455**

Navagram Constituency name	2001-02 Target	2001-02 Completed	2002-03 Target	2002-03 Completed
Byndoor	150	20	240	0
Kundapura	226	0	176	0
Brahmavara	146	0	56	0
Udupi	150	0	92	0
K	140	0	88	0
Karkala	180	7	217	0
Total	**992**	**27**	**869**	**0**

Rural Ashraya Constituency name	2000-01 Target	2000-01 Completed	2001-02 Target	2001-02 Completed	2002-03 Target	2002-03 Completed
Udupi	46	45	202	191	200	43
Kundapura	6	6	5	5	53	2
Karkala	60	60	59	59	53	13
Brahmavara	29	28	13	11	43	6
Total	**141**	**139**	**279**	**266**	**340**	**64**

2002-03 ಹಾಗೂ 2003-04ನೇ ಸಾಲಿನಲ್ಲಿ ರಾಜ್ಯದಲ್ಲಿ ಹೊಸ ಪ್ರೌಢ ಶಾಲೆಗಳನ್ನು ಪ್ರಾರಂಭಿಸುವ ಬಗ್ಗೆ

2930(2683) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2002-03 ಮತ್ತು 2003-04ನೇ ಸಾಲಿನಲ್ಲಿ ಈವರೆಗೆ ರಾಜ್ಯದಲ್ಲಿ ಹೊಸದಾಗಿ ಎಷ್ಟು ಪ್ರೌಢ ಶಾಲೆಗಳನ್ನು ಸ್ಥಾಪಿಸಲು ಅನುಮೋದನೆ ನೀಡಲಾಗಿದೆ;

ಆ) ಯಾವ ಯಾವ ಪ್ರೌಢ ಶಾಲೆಗಳನ್ನು ಈಗಾಗಲೇ ತೆರೆಯಲಾಗಿದೆ; (ಕ್ಷೇತ್ರವಾರು ವಿವರ ನೀಡುವುದು)

ಇ) ಇನ್ನೆಷ್ಟು ಪ್ರೌಢ ಶಾಲೆಗಳನ್ನು ಎಲ್ಲೆಲ್ಲಿ ಪ್ರಾರಂಭಿಸಲಾಗುವುದು?

ಪ್ರೊ. ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) 2002-03ನೇ ಸಾಲಿನಲ್ಲಿ 75 ಸರ್ಕಾರಿ ಪ್ರೌಢ ಶಾಲೆಗಳು ಮಂಜೂರಾಗಿದ್ದು ಇವುಗಳಲ್ಲಿ 5 ಶಾಲೆಗಳನ್ನು 2002-03 ನೇ ಸಾಲಿನಲ್ಲಿ ಪ್ರಾರಂಭಿಸಿದ್ದು ಉಳಿದ 70 ಶಾಲೆಗಳನ್ನು ಮಂಜೂರು ಮಾಡುವಾಗ 2002-03ನೇ ಸಾಲಿನ ಶೈಕ್ಷಣಿಕ ವರ್ಷದ ಅರ್ಧ ವರ್ಷ ಮುಕ್ತಾಯಗೊಂಡಿದ್ದರಿಂದ 2003-04ನೇ ಸಾಲಿನಲ್ಲಿ ತೆರೆಯಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿರುತ್ತದೆ ಹಾಗೂ 2003-04ನೇ ಸಾಲಿಗೆ ಈ ವರೆವಿಗೆ 74 ಸರ್ಕಾರಿ ಪ್ರೌಢ ಶಾಲೆಗಳನ್ನು ಮಂಜೂರು ಮಾಡಿದೆ.

ಆ) ಅನುಬಂಧದಲ್ಲಿ ಲಗತ್ತಿಸಿದೆ.

ಇ) ಪರಿಶೀಲಿಸಲಾಗುತ್ತಿದೆ.

ಬ್ರಹ್ಮಾವರ ಕ್ಷೇತ್ರದಲ್ಲಿ ನೂತನ ಪ್ರೌಢ ಶಾಲೆಗಳನ್ನು ಪ್ರಾರಂಭಿಸುವುದು

2931(2684) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದಲ್ಲಿ ಮುಂದಿನ ಶೈಕ್ಷಣಿಕ ವರ್ಷಗಳಲ್ಲಿ ಎಷ್ಟು ನೂತನ ಪ್ರೌಢ ಶಾಲೆಗಳನ್ನು ಪ್ರಾರಂಭಿಸಲು ಯೋಜಿಸಲಾಗಿದೆ;

ಆ) ಅವುಗಳನ್ನು ಯಾವಾಗ ಪ್ರಾರಂಭಿಸಲಾಗುವುದು?

ಪ್ರೊ. ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) 2004-05ನೇ ಸಾಲಿಗೆ ಹಾಗೂ ಮುಂದಿನ ವರ್ಷಗಳಲ್ಲಿ ಶಿಕ್ಷಣ ಇಲಾಖೆಗೆ ದೊರೆಯಬಹುದಾದ ಆಯವ್ಯಯವನ್ನು ಅವಲಂಬಿಸಿ. ಈ ಬಗ್ಗೆ ಆಯಾ ವರ್ಷದಲ್ಲಿ ಪ್ರಸ್ತಾವನೆಗಳನ್ನು ತರಿಸಿ ಪರಿಶೀಲಿಸಲಾಗುವುದು.

ರಾಜ್ಯದಲ್ಲಿ ನೂತನ ಕಾನೂನು ಪದವಿ ಕಾಲೇಜ್ ಮತ್ತು ಪಿ.ಜಿ. ಸೆಂಟರ್ ಸ್ಥಾಪನೆ ಕುರಿತು

2932(3240) ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸದಾಗಿ ಕಾನೂನು ಪದವಿ ಕಾಲೇಜ್ ಮತ್ತು ಪಿ.ಜಿ. ಸೆಂಟರ್ ಪ್ರಾರಂಭಿಸುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕೊಪ್ಪಳ ಜಿಲ್ಲೆಯಲ್ಲಿ ಈ ಕಾಲೇಜುಗಳನ್ನು ಪ್ರಾರಂಭಿಸಲಾಗುವುದೇ;

ಇ) ಕಳೆದ ವರ್ಷ ಪ್ರಾರಂಭವಾದ ಪದವಿ ಕಾಲೇಜಿಗೆ ಸ್ವಂತ ಕಟ್ಟಡವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು?

ಡಾ: ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು)

ಅ) ಇಲ್ಲ.

ಆ) ಇಲ್ಲ

ಇ) ಹೌದು. ಕಟ್ಟಡಕ್ಕೆ ನಿವೇಶನವನ್ನು ಪಡೆಯಲು ಪ್ರಯತ್ನಿಸಲಾಗುತ್ತಿದೆ. ನಿವೇಶನ ದೊರೆತ ನಂತರ ಕಟ್ಟಡದ ಬಗ್ಗೆ ಪರಿಶೀಲಿಸಲಾಗುವುದು.

ಕೊಪ್ಪಳ ಜಿಲ್ಲೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಯ ಶಿಕ್ಷಕರ ನೇಮಕಾತಿ ಕುರಿತು

2933(3241) ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಯ ಶಿಕ್ಷಕರನ್ನು ತುಂಬುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಶೈಕ್ಷಣಿಕ ವರ್ಷದಲ್ಲಿ ಹೊಸ ಪ್ರೌಢ ಶಾಲೆಗಳನ್ನು ತೆರೆಯುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಕಳೆದ 2002–03ನೇ ಸಾಲಿನಲ್ಲಿ ನೇಮಕಾತಿ ಹೊಂದಿದ ಪ್ರಾಥಮಿಕ ಶಾಲಾ ಶಿಕ್ಷಕರು ಕೊಪ್ಪಳ ಜಿಲ್ಲೆಯಿಂದ ಈಗಾಗಲೇ ವರ್ಗಾವಣೆ ಹೊಂದಿರುವುದರಿಂದ ಪುನಃ ಶಿಕ್ಷಕರ ಕೊರತೆ ಪ್ರಾರಂಭವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಪ್ರೊ. ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) 2003–04ನೇ ಸಾಲಿನಲ್ಲಿ ರಾಜ್ಯದ ವಿವಿಧ ಸ್ಥಳಗಳಲ್ಲಿ 73 ಹೊಸ ಪ್ರೌಢ ಶಾಲೆಗಳನ್ನು ಪ್ರಾರಂಭಿಸಲು ಸರ್ಕಾರ ಅನುಮತಿ ನೀಡಿದೆ.

ಇ) ಬಂದಿದೆ. ವರ್ಗಾವಣೆಗೊಂಡು ಖಾಲಿಯಾದ ಹುದ್ದೆಗಳನ್ನು ನೇಮಕಾತಿ ಮೂಲಕ ಭರ್ತಿ ಮಾಡಲಾಗುವುದು. ಕೊಪ್ಪಳ ಜಿಲ್ಲೆಯಲ್ಲಿ ಖಾಲಿ ಇರುವ 152 ಹುದ್ದೆಗಳನ್ನು ಭರ್ತಿ ಮಾಡಲು ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗಿದ್ದು, ಇನ್ನೆರಡು ತಿಂಗಳಲ್ಲಿ ಪೂರ್ಣಗೊಳಿಸಲಾಗುವುದು.

ಕೊಪ್ಪಳ ಜಿಲ್ಲಾ ಆಸ್ಪತ್ರೆಯ ಕಾಮಗಾರಿಗಳನ್ನು ಕುರಿತು

2934(3242) ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಪ್ಪಳ ಜಿಲ್ಲಾ ಆಸ್ಪತ್ರೆಯ ಕಾಮಗಾರಿಯನ್ನು ಎಂದು ಪ್ರಾರಂಭಿಸಲಾಗುವುದು;

ಆ) ಈ ಆಸ್ಪತ್ರೆಯಲ್ಲಿ ವೈದ್ಯರು ಮತ್ತು ಸಿಬ್ಬಂದಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದರೆ, ತೆಗೆದುಕೊಂಡ ಕ್ರಮವೇನು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಕೊಪ್ಪಳ ಜಿಲ್ಲಾ ಆಸ್ಪತ್ರೆಯ ಕಾಮಗಾರಿಯು ಜರ್ಮನಿಯ ಕೆ.ಎಫ್.ಡಬ್ಲ್ಯೂ ಸಂಸ್ಥೆಯ ನೆರವಿನ ಕರ್ನಾಟಕ ದ್ವಿತೀಯ ಹಂತದ ಆಸ್ಪತ್ರೆಗಳ ಅಭಿವೃದ್ಧಿ (ಕೆ.ಎಫ್.ಡಬ್ಲ್ಯೂ) ಯೋಜನೆಯ 2ನೇ ಹಂತದಲ್ಲಿ ಸೇರಿಸಲಾಗಿದೆ. ಈ ಯೋಜನೆಯಡಿ ಗುಲ್ಬರ್ಗಾ ವಿಭಾಗದ 21 ಆಸ್ಪತ್ರೆಗಳ ನವೀಕರಣ ಮತ್ತು ವಿಸ್ತರಣೆ ಕಾಮಗಾರಿಗಳಿಗೆ ಕೆ.ಎಫ್.ಡಬ್ಲ್ಯೂ ಸಂಸ್ಥೆಯೊಂದಿಗೆ ಹಣಕಾಸಿನ ಒಪ್ಪಂದವಾದ ನಂತರ ಪ್ರಾರಂಭಿಸಲಾಗುವುದು.

ಆ) ಹೌದು.

ಇ) ಈ ಆಸ್ಪತ್ರೆಗೆ 10 ವೈದ್ಯರ ಹುದ್ದೆಗಳು ಮಂಜೂರಾಗಿದ್ದು ಅವುಗಳನ್ನು 3 ಹುದ್ದೆಗಳು ಮಾತ್ರ ಖಾಲಿ ಇರುತ್ತದೆ. 12 ಶುಶ್ರೂಷಕಿಯರು, 3 ಪ್ರಯೋಗ ಶಾಲಾ ತಂತ್ರಜ್ಞರು, 1 ಫಾರ್ಮಾಸಿಸ್ಟ್ ಮತ್ತು 1 ಹಿರಿಯ ಆರೋಗ್ಯ ಸಹಾಯಕ ಹುದ್ದೆಗಳು ಖಾಲಿ ಇರುತ್ತವೆ.

ಸೇವಾ ನಿರತ ವೈದ್ಯರುಗಳು ಸ್ನಾತಕೋತ್ತರ ವ್ಯಾಸಂಗವನ್ನು ಪೂರ್ಣಗೊಳಿಸಿ ಬಂದ ನಂತರ ತಜ್ಞರನ್ನು ಖಾಲಿ ಇರುವ ಹುದ್ದೆಗೆ ನೇಮಕ ಮಾಡಲಾಗುವುದು.

ಇತರೆ ಖಾಲಿ ಇರುವ ಹುದ್ದೆಗಳನ್ನು ವಿಶೇಷ ನೇಮಕಾತಿ ಸಮಿತಿಯ ಮುಖಾಂತರ ಭರ್ತಿ ಮಾಡಲಾಗುವುದು. ಈ ಕಾರ್ಯವು ಪ್ರಗತಿಯಲ್ಲಿದೆ. ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿ ಕಾರ್ಯವು ಮುಗಿದಿದ್ದು ಸಿಂಧುತ್ವ ಪ್ರಮಾಣ ಪತ್ರ ಮತ್ತು ಪೋಲೀಸ್ ವರದಿ ಬಂದ ಕೂಡಲೇ ನೇಮಕಾತಿ ಆದೇಶ ಹೊರಡಿಸಿ ಭರ್ತಿ ಮಾಡಲಾಗುವುದು.

ಶಿಗ್ಗಾಂವ್ ತಾಲ್ಲೂಕಿನಲ್ಲಿ ಪದವಿ ಪೂರ್ವ ಮಹಾವಿದ್ಯಾಲಯಗಳ ಮಂಜೂರಾತಿ ಕುರಿತು

2935(3212) ಶ್ರೀ ಖಾದ್ರಿ ಎಸ್.ಎಸ್. (ಶಿಗ್ಗಾಂವ್) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪ್ರಸಕ್ತ ವರ್ಷದಲ್ಲಿ ಸರ್ಕಾರ ಮಂಜೂರು ಮಾಡಿದ ಪದವಿ ಪೂರ್ವ ವಿದ್ಯಾಲಯಗಳ ಸಂಖ್ಯೆ ಎಷ್ಟು;

ಆ) ಶಿಗ್ಗಾಂವ ತಾಲ್ಲೂಕು ಕಡಪ ಗ್ರಾಮದಲ್ಲಿ ಸರ್ಕಾರಿ ಪದವಿ ಪೂರ್ವ ಮಹಾವಿದ್ಯಾಲಯ ಮಂಜೂರು ಮಾಡಲಾಗುವುದೇ?

ಪ್ರೊ: ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಯಾವುದೇ ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ಮಂಜೂರು ಮಾಡಿರುವುದಿಲ್ಲ.

ಆ) ಇಲ್ಲ.

ಹಾವೇರಿ ಜಿಲ್ಲೆಯ ಶಿಗ್ಗಾಂವ್ ತಾಲ್ಲೂಕಿನಲ್ಲಿ 2002-03ನೇ ಸಾಲಿನಲ್ಲಿ ಮಂಜೂರಾದ ಪ್ರೌಢ ಶಾಲೆಗಳ ಬಗ್ಗೆ

2936(3238) ಶ್ರೀ ಖಾದ್ರಿ ಎಸ್.ಎಸ್. (ಶಿಗ್ಗಾಂವ್) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ 2002–03ನೇ ಸಾಲಿನಲ್ಲಿ ಮಂಜೂರು ಮಾಡಲಾದ ಪ್ರೌಢ ಶಾಲೆಗಳ ಸಂಖ್ಯೆ ಎಷ್ಟು;

ಆ) ಪ್ರಸಕ್ತ ಸಾಲಿನಲ್ಲಿ ಹಾವೇರಿ ಜಿಲ್ಲೆಯಲ್ಲಿ ಮಂಜೂರಾದ ಪ್ರೌಢ ಶಾಲೆಗಳೆಷ್ಟು; (ಜಿಲ್ಲಾವಾರು ಮಾಹಿತಿ ಒದಗಿಸುವುದು)

ಇ) ಇದರಲ್ಲಿ ಹಾವೇರಿ ಜಿಲ್ಲೆ ಶಿಗ್ಗಾಂವ ತಾಲ್ಲೂಕಿನಲ್ಲಿ ಎಷ್ಟು ಪ್ರೌಢ ಶಾಲೆ ಮಂಜೂರು ಮಾಡಲಾಗಿದೆ?

ಶ್ರೀ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) 75.

ಆ) ಒಂದು.

ಇ) ಇಲ್ಲ.

ರಾಜ್ಯದಲ್ಲಿ ಟಿ.ಸಿ.ಎಚ್. ಕಾಲೇಜು ಮಂಜೂರಾತಿಯ ಬಗ್ಗೆ

2938(2691) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸದಾಗಿ ಎಷ್ಟು ಟಿ.ಸಿ.ಹೆಚ್. ಕಾಲೇಜುಗಳನ್ನು ಮಂಜೂರು ಮಾಡಲಾಗುವುದು;

ಆ) ಯಾವ ಷರತ್ತುಗಳೊಂದಿಗೆ ಈ ಕಾಲೇಜುಗಳನ್ನು ಮಂಜೂರಾತಿ ನೀಡಲಾಗುವುದು;

ಇ) ಯಾವ ಯಾವ ಸ್ಥಳಗಳಲ್ಲಿ ಕಾಲೇಜುಗಳನ್ನು ಮಂಜೂರು ಮಾಡಲಾಗುವುದು?

ಪ್ರೊ. ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ,ಆ,ಇ) ದಿನಾಂಕ 27–7–2001ರ ಸರ್ಕಾರದ ಆದೇಶ ಸಂಖ್ಯೆ: ಇಡಿ:110:ಪಿಟಿಪಿ:2001ರ ಪ್ರಕಾರ ನಿಗದಿಪಡಿಸಿದ ಪ್ರಕ್ರಿಯೆಯನ್ನು ಅನುಸರಿಸಿ, ಈಗಾಗಲೇ ಅರ್ಹ ಅರ್ಜಿದಾರರಿಗೆ ಎನ್.ಓ.ಸಿ. ನೀಡಲು ಕ್ರಮ ತೆಗೆದುಕೊಳ್ಳಲಾಗಿದೆ. ಇನ್ನೂ ಹೆಚ್ಚುವರಿ ಶಿಕ್ಷಕರ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸುವುದು ಅಗತ್ಯವೆಂದು ಸರ್ಕಾರ ಮನಗಂಡಿದೆ. ಇದಕ್ಕಾಗಿ, ದಿನಾಂಕ 27–7–2001ರ ಸದರಿ ಆದೇಶವನ್ನು ಸೂಕ್ತವಾಗಿ ಮಾರ್ಪಡಿಸಿ, ಹೊಸ ಆದೇಶವನ್ನು ಹೊರಡಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈ ಹಿನ್ನೆಲೆಯಲ್ಲಿ, ಅಂತಹ ಎಷ್ಟು ಸಂಸ್ಥೆಗಳನ್ನು ಸ್ಥಾಪಿಸಲು ಎನ್.ಓ.ಸಿ. ಗಳನ್ನು ನೀಡಲಾಗುವುದೆಂದು ನಿರ್ದಿಷ್ಟವಾಗಿ, ಈ ಹಂತದಲ್ಲಿ ಹೇಳಲು ಬರುವುದಿಲ್ಲ.

ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸ್ವಂತ ಕಟ್ಟಡದ ಸೌಲಭ್ಯ ಕುರಿತು

2939(2692) ಶ್ರೀ ಕೌಜಲಗಿ ಮಹಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಬುಡರಕಟ್ಟಿ ಹಾಗು ಸವದತ್ತಿ ತಾಲ್ಲೂಕಿನ ಸುತಗಟ್ಟಿ ಗ್ರಾಮಗಳಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸ್ವಂತ ಕಟ್ಟಡಗಳು ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ ಕೂಡಲೇ ಇಲ್ಲಿ ಕಟ್ಟಡಗಳನ್ನು ಕಟ್ಟಲು ಕ್ರಮ ಕೈಗೊಳ್ಳಲಾಗುವುದೇ?